ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.1261/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಯಮನಮ್ಮ** | | |
| **ಗಂಡನ ಹೆಸರು** | **ಚಿದಾನಂದಪ್ಪ** | **ಪಿಡಬ್ಲೂ:** | **1** |
| **ವಯಸ್ಸು** | **60 ವರ್ಷ** | **ಸಿಡಬ್ಲೂ:** | **1** |
| **ಉದ್ಯೋಗಃ** | **ಗೃಹಿಣಿ** | | |
| **ವಾಸ ಸ್ಥಳಃ** | **ಬೆಳಗುರ್ಕಿ.** | | |

**ದಿನಾಂಕ 08-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಚಾಸಾ-2 ನನ್ನ ಮಗ. ಚಾಸಾ-3 ರಿಂದ 7 ರವರು ನಮ್ಮ ಗ್ರಾಮಸ್ಥರು. ಚಾಸಾ-8 ನನ್ನ ಗಂಡ. 1 ನೇ ಆರೋಪಿ ನನ್ನ ಸೊಸೆ. ಉಳಿದ ಆರೋಪಿತರು ನಮ್ಮ ಬೀಗರು.

ದಿ.12-08-2023 ರಂದು ಸಂಜೆ 4 ಗಂಟೆಯ ಸುಮಾರಿಗೆ ಚಾಸಾ-2 ರವರು ನಮ್ಮ ಮನೆಯಲ್ಲಿದ್ದಾಗ, ಆರೋಪಿತರು ಬಂದು, ಲೇಸೂಳೆ ನನ್ನ ಮಗಳ ಭವಿಷ್ಯ ಹಾಳು ಮಾಡಿದೆ ಎಂದು ಬೈದು, ನನಗೆ ಹೊಡೆದಿರುತ್ತಾರೆ. ಆಗ ನಾನು ಚೀರಿಕೊಂಡಾಗ ನನ್ನ ಮಗ ಚಾಸಾ-2 ರವರು ಬಿಡಿಸಲು ಬಂದರು. ಆಗ 2 & 3 ನೇ ಆರೋಪಿತರು ಚಪ್ಪಲಿಯಿಂದ ಚಾಸಾ-2 ರವರಿಗೆ ಹೊಡೆದರು. ಆಗ ನಾನು ಆತನನ್ನು ಬಿಡಿಸಲು ಹೋದೆ, 1, 4 & 5 ನೇ ಆರೋಪಿತರು ನನ್ನ ತಲೆ ಕೂದಲು ಹಿಡಿದು ಮನೆಯಿಂದ ಹೊರಗೆ ಎಳೆದುಕೊಂಡು ಬಂದರು, ನನ್ನ ಸೀರೆ ಹಿಡಿದು ಎಳೆದಾಡಿದರು, ಆಗ ನನ್ನ ನಾನು ಚೀರಾಡಿದಾಗ ನನ್ನ ಗಂಡ ಚಾಸಾ-8 ರವರು ಬಿಡ್ರಲೇ ಎಂದು ಕೂಗಿದಾಗ, 4 & 5 ನೇ ಆರೋಪಿತರು ಚಾಸಾ-8 ರವರಿಗೆ ಕಾಲಿನಿಂದ ಒದ್ದಿರುತ್ತಾರೆ, ಆಗ ಚಾಸಾ-8 ರವರು ಅಲ್ಲಿಯೇ ಮೂರ್ಛೆ ಹೋಗಿರುತ್ತಾರೆ. ಆಗ ಚಾಸಾ-3 & 4 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ

ಆರೋಪಿತರು ಇನ್ನೊಂದು ಸಾರಿ ನನ್ನ ಮಗಳ ತಂಟೆಗೆ ಬಂದರೆ ನಿಮ್ಮ ಪ್ರಾಣಕ್ಕೆ ದಕ್ಕೆ ಇದೆ ಎಂದು ಜೀವದ ಬೆದರಿಕೆ ಹಾಕಿದರು.

ನಂತರ ನಾನು ಠಾಣೆಗೆ ಹೋಗಿ ದೂರು ಕೊಟ್ಟಾಗ, ದೂರನ್ನು ಸ್ವೀಕರಿಸಿರುವುದಿಲ್ಲ. ನಂತರ ವಕೀಲರ ಮುಖಾಂತರ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ. ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಖಾಸಗಿ ದೂರನ್ನು ಮತ್ತು ಅದರಲ್ಲಿನ ತನ್ನ ಹೆಬ್ಬಟ್ಟಿನ ಗುರುತನ್ನ ನೋಡಿ ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ</u>**

ಜಗಳವಾದಾಗ 1, 4 & 5 ನೇ ಆರೋಪಿತರು ನಮ್ಮ ಸಂಸಾರ ಹಾಳು ಆಗಲು ನೀನೇ ಕಾರಣ ಎಂದು ಕೈಗಳಿಂದ ಹೊಡೆದರು ಎಂದರೆ ಸರಿ. ಬಿಡಿಸಲು ಬಂದ ಚಾಸಾ-2 ರವರಿಗೆ 2 & 3 ನೇ ಆರೋಪಿತರು ಕೈಗಳಿಂದ ಹೊಡೆದು, ಕಾಲಿನಿಂದ ಒದ್ದರು ಎಂದರೆ ಸರಿ. ನನ್ನ ಸೀರೆ ಹಿಡಿದು ಎಳೆದಾಡಿ, ಕಾಲಿನಿಂದ ಒದ್ದಿದ್ದರು ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ.

ದಿ.08-07-2024 ರಂದು ಪೋಲಿಸರು ಸ್ಥಳಕ್ಕೆ ಬಂದು, ಸಂಜೆ 5 ರಿಂದ 6 ಗಂಟೆಯವರೆಗೆ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿದ್ದರು ಎಂದರೆ ಸರಿ. ಆ ಕಾಲಕ್ಕೆ ನನ್ನೊಂದಿಗೆ ಚಾಸಾ-9 & 10 ರವರು ಇದ್ದರು ಎಂದರೆ ಸರಿ.

**<u>ಪಾಟೀಸವಾಲುಃ ಶ್ರೀ.ವಿ.ಬಿ.ಆರ್. ಆರೋಪಿ ಪರ ವಕೀಲರಿಂದಃ</u>**

1. ಬೆಳಗುರ್ಕಿಯಲ್ಲಿ ನಮ್ಮ ಮನೆ ಸೂರ್ಯ ಹುಟ್ಟುವ ಕಡೆ ಇದೆ. ನಮ್ಮ ಮನೆಯ ಎಡಕ್ಕೆ ಮತ್ತು ಬಲಕ್ಕೆ ಮನೆಗಳು ಇವೆ, ಸದರಿ ಮನೆಗಳು 10 ಮೀ. ಅಂತರದಲ್ಲಿವೆ. ನಮ್ಮದು 2 ಮನೆಗಳಿವೆ. ಘಟನೆಯಾಗುವ ಕಾಲಕ್ಕೆ ನಾನು ಮತ್ತು ಚಾಸ-2 ರವರು ಒಂದೇ ಮನೆಯಲ್ಲಿದ್ದೆವು.

2. ಚಾಸಾ-2 & 1 ನೇ ಆರೋಪಿಯದ್ದು ಪ್ರೇಮ ವಿವಾಹ ಎಂದರೆ ಸರಿ. ಸದರಿ ಮದುವೆಗೆ ನಮ್ಮ ಮತ್ತು ಅವರ ಇಬ್ಬರ ಮನೆಯವರ ಒಪ್ಪಿಗೆ ಇರಲಿಲ್ಲ.

3. ಪೋಲೀಸರಿಗೆ ದೂರನ್ನು ಘಟನೆಯಾದ ದಿನವೇ ಕೊಟ್ಟಿದ್ದೆ. ಹೇಗಾದರೂ ಸರಿ ಮಾಡಿಕೊಳ್ಳಬೇಕೆಂದು ಸ್ವಲ್ಪ ದಿನ ಬಿಟ್ಟಿದ್ದೆವು. ನಂತರ ಪೋಸ್ಟ್ ಮುಖಾಂತರ ದೂರನ್ನು ಪೋಲೀಸರಿಗೆ ಕಳಿಸಿಲ್ಲ. ನಾನು ನ್ಯಾಯಾಲಯಕ್ಕೆ ಲಿಖಿತ ಹೇಳಿಕೆ ಕೊಟ್ಟಿದ್ದನ್ನು ಹೊರತುಪಡಿಸಿ, ಠಾಣೆಗೆ ಹೋದಾಗ ಹೇಳಿ ಬರೆಸಿ ಬಂದಿದ್ದೆ.

4. ದಿ.04-11-2023 ರಂದು ಎಸ್. ಪಿ. ರವರಿಗೆ ದೂರು ಕೊಟ್ಟಿದ್ದಿರಾ ಎಂದರೆ ನನಗೆ ನೆನಪಿಲ್ಲ. ದಿ.14-08-2023 ರಂದು ನಿಮ್ಮ ಪ್ರಕಾರ ಘಟನೆ ನಡೆದಿತ್ತು, ಆದರೆ ದಿ.04-11-2023 ರಂದು ಎಸ್ ಪಿ ರವರಿಗೆ ಭೇಟಿ ಆಗಿದ್ದಿರಿ ಎಂದರೆ ನನಗೆ ದಿನಾಂಕ ಅಷ್ಟೋಂದು ಗೊತ್ತಾಗುವುದಿಲ್ಲ ಎನ್ನುತ್ತಾರೆ. ಘಟನೆಯಾದ 4 ತಿಂಗಳುಗಳ ನಂತರ ನೀವು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನೋಡೋಣ ಎಂದು ಸುಮ್ಮನಿದ್ದೆವು ಎನ್ನುತ್ತಾರೆ.

5. ಸಾಕ್ಷಿಗೆ ಕಡತದಲ್ಲಿ ಲಭ್ಯವಿರುವ ದಿ.04-11-2023 ರ ದೂರಿನಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಆದರೆ ಸಾಕ್ಷ್ಯ ಅಧಿನಿಯಮದ ಪ್ರಕಾರ ಹೆಬ್ಬೆಟ್ಟಿನ ಗುರುತನ್ನು ನಿಶಾನೆಗೊಳಿಸಲು ಬರುವುದಿಲ್ಲ ಎಂಬ ಕಾರಣದಿಂದ ಸದರಿ ದಾಖಲೆಯನ್ನು ಕಡತದಲ್ಲಿ ಹಾಗೆಯೇ ಇರಿಸಲಾಯಿತು.

6. ಸಂಜೆ ವೇಳೆಯಲ್ಲಿ ಹೊಲದ ಕೆಲಸ ಮುಗಿಸಿ ಎಲ್ಲರೂ ಮನೆಯಲ್ಲಿರುತ್ತಾರೆ ಎಂದರೆ ಸರಿ. ನಮ್ಮ ಮನೆಯ ಸುತ್ತುಮುತ್ತ ಬಸವರಾಜ, ಮುದಿಯಪ್ಪರವರ ಮನೆಗಳಿವೆ, ಅವರು ಮನೆಗಳು ನಮ್ಮ ಮನೆಗಳಿಂದ 10-12 ಮನೆಗಳಾದ ನಂತರ ಇವೆ. 10-12 ಮನೆಗಳವರು ಇರಲಿಲ್ಲವೇ ಎಂದರೆ ಸಾಕ್ಷಿಯು ಅವರು ಗೌಡರ ಮಂದಿ, ಅವರು ಮನೆಯ ಬೀಗ ಹಾಕಿಕೊಂಡು ಮನೆಯಲ್ಲಿ ಕುಳಿತಿರುತ್ತಾರೆ ಎನ್ನುತ್ತಾರೆ.

7. ನಾನು ಮತ್ತು ಚಾಸಾ-8 ರವರು ಒಂದು ಮನೆಯಲ್ಲಿದ್ದೆವು, ಚಾಸಾ-2 ರವರು ಇನ್ನೊಂದು ಮನೆಯಲ್ಲಿದ್ದನು. ಚಾಸಾ-8 ರವರಿಗೆ ಆಗ ಆರೋಗ್ಯ ಸರಿಯಿರಲಿಲ್ಲ. ನಿಪಿ-1 ರಲ್ಲಿ ಚಾಸಾ-8 ರವರನ್ನು ದೂಕಿದರು, ಅದರಿಂದ ಚಾಸಾ-8 ರವರಿಗೆ ಬಿಪಿಯಲ್ಲಿ ಹೆಚ್ಚುಕಮ್ಮಿಯಾಗಿ ಮೂರ್ಛೆ ಹೋಗಿದ್ದರು ಎಂದು ಬರೆಸಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಈಗ ನೆನಪಿಲ್ಲ ಎನ್ನುತ್ತಾರೆ. ನಿಪಿ-1 ಮತ್ತು ಅಂತಿಮ ವರದಿಯಲ್ಲಿರುವುದು ಸರಿಯಿಲ್ಲ, ನಾನು ಈಗ ಹೇಳುತ್ತಿರುವುದು ಸರಿ ಇದೆ ಎನ್ನುತ್ತಾರೆ.

8. ಚಾಸಾ-8 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದೆವು. ಚಾಸಾ-8 ರವರನ್ನು ಮೊದಲು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದೆವು. ಘಟನೆಯ ವಿಷಯವನ್ನು ವೈದ್ಯರ ಹತ್ತಿರ ಹೇಳಿದ್ದೆವು. ಸರ್ಕಾರಿ ವೈದ್ಯರು ಇದು ಹೊಡೆದಾಟದ ಪ್ರಕರಣ, ಆದ್ದರಿಂದ ಮೊದಲು ದೂರು ಕೊಡಿ, ನಂತರ ಚಿಕಿತ್ಸೆ ಕೊಡುತ್ತೇವೆಂದು ಹೇಳಿದ್ದರು, ಆಗ ಪೋಲೀಸರು ಆಸ್ಪತ್ರೆಗೆ ಬಂದು ಹೇಳಿಕೆ ಪಡೆದಿದ್ದರು.

9. ನಮ್ಮದು 8 ಎಕರೆ ಜಮೀನು ಇದೆ. ಚಾಸಾ-3 & 4 ರವರು ನಮ್ಮ ಹೊಲಕ್ಕೆ ಕೆಲಸಕ್ಕೆ ಬರುವುದಿಲ್ಲ. ಅವರು ನಾವು ಕೂಗಾಡುವುದು, ಚೀರಾಡುವುದನ್ನು ಕೇಳಿ ನಮ್ಮ ಮನೆಯ ಹತ್ತಿರ ಬಂದಿದ್ದರು. ಆರೋಪಿತರು ಬಂದ ನಂತರ, ಅದನ್ನು ನೋಡಿ ಚಾಸಾ-3 & 4 ರವರು ಏನಾದರೂ

ಮಾಡಬಹುದು ಎಂದು ಹಿಂದೆ ಬಂದಿದ್ದರು. ಹೊಸ ಊರಿನ ಒಳಬಳ್ಳಾರಿ-ಸಿಂಧನೂರು ರಸ್ತೆಗೆ ಹೊಂದಿಕೊಂಡು ಚಾಸಾ-4 ರವರ ಮನೆ ಇದೆ, ಚಾಸಾ-3 ರವರ ಮನೆ ಮಾರೆಮ್ಮನ ಗುಡಿಯ ಹತ್ತಿರ ಇದೆ. ಮಾರೆಮ್ಮನ ಗುಡಿ ಮತ್ತು ರಸ್ತೆಗೆ ಅರ್ಧ ಕಿ.ಮೀ. ಅಂತರ ಇದೆ. ಮಾರೆಮ್ಮನ ಗುಡಿಯಿಂದ ನಮ್ಮ ಮನೆಗೆ 10-15 ಮನೆಗಳ ಅಂತರ ಇದೆ. ಘಟನೆ ನಡೆಯುವ ಕಾಲಕ್ಕೆ ಚಾಸಾ-3 & 4 ರವರು ಐನೋರ ಶಂಕರೇಗೌಡರವರ ಹೋಟೆಲ್ ಬಳಿ ಕುಳಿತಿದ್ದು, ಆರೋಪಿತರು ಆಟೋ ಮತ್ತು ಒಂದು ಜೀಪಿನಲ್ಲಿ 20 ಜನರು ಬಂದಿದ್ದರು, ಅದನ್ನು ನೋಡಿ ಚಾಸಾ-3 & 4 ರವರು ಅವರ ಹಿಂದೆ ಬಂದಿದ್ದರು. ಸದರಿ ವಿಚಾರವನ್ನು ನನ್ನ ಖಾಸಗಿ ದೂರಿನಲ್ಲಿ ಹೇಳಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ, ಆದರೆ ಪೋಲೀಸರಿಗೆ ಹೇಳಿರುತ್ತೇನೆ.

10. ಪಂಚಾಯಿತಿಗೆಂದು ಬಂದಾಗ ಸದರಿ ಘಟನೆ ಆಗಿತ್ತು. ಅವರು 20 ಜನ ಮತ್ತು ಆರೋಪಿತರು 5 ಜನ ನಮ್ಮನ್ನು ಹೊಡೆಯಲು ಬಂದಿದ್ದರು. ಆರೋಪಿತರು ಸೀದಾ ನಮ್ಮ ಮನೆಗೆ ಬಂದಿದ್ದರು, ಜೀಪು ಮತ್ತು ಆಟೋ ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಬಂದು ನಿಂತಿತ್ತು. ಸದರಿ ವಿಚಾರವನ್ನು ನನ್ನ ಖಾಸಗಿ ದೂರಿನಲ್ಲಿ ಬರೆಸಿರುತ್ತೇನೆ ಮತ್ತು ಪೋಲೀಸರಿಗೆ ಹೇಳಿರುತ್ತೇನೆ.

11. ನನ್ನ, ಚಾಸಾ-2 & 8 ರವರ ಮೇಲೆ 1 ನೇ ಆರೋಪಿ ದೂರು ಕೊಟ್ಟಿರುತ್ತಾಳೆ ಎಂದರೆ ಸರಿ. ಚಾಸಾ-2 ರವರು ಕುಡಿದು ಬಂದು 1 ನೇ ಆರೋಪಿಗೆ ಹೊಡೆದಿದ್ದನು ಎಂದರೆ ಸಾಕ್ಷಿಯು ಚಾಸಾ-2 ರವರು ಕುಡಿಯುವುದಿಲ್ಲ ಎನ್ನುತ್ತಾರೆ. 1 ನೇ ಆರೋಪಿ ಕೊಟ್ಟ ದೂರಿಗೆ ಪ್ರತಿಯಾಗಿ ಈ ಊಹಾ ಪೋಹವಾಗಿ ಈ ದೂರು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ.

12. 1 ನೇ ಆರೋಪಿ ಮತ್ತು ಚಾಸಾ-2 ರವರು ಪ್ರೇಮ ವಿವಾಹ ಆಗಿದ್ದರಿಂದ, ಆಗಿನಿಂದ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಕಿರುಕುಳ ಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ನಿಮಗೆ ಇಷ್ಟವಿಲ್ಲದ ಮದುವೆಯಾಗಿರುವ ಕಾರಣ ಈ ರೀತಿ ಸುಳ್ಳು ದೂರು ಕೊಟ್ಟು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**